# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

## ಸಿ.ಸಿ. ನಂ.07/2022

CW-3/PW-4

| | | |
|---|---|---|
| ಹೆಸರು | ಃ- | ಸಾತ್ವಿಕ್ ಗೌಡ |
| ತಂದೆ ಹೆಸರು | ಃ- | ಪ್ರಕಾಶ್ |
| ವಯಸ್ಸು | ಃ- | 25 ವರ್ಷ |
| ವೃತ್ತಿ | ಃ- | - |
| ವಾಸ ಸ್ಥಳ | ಃ- | ರಾಮನಗರ |
| ದಿನಾಂಕ | ಃ- | 12.09.2024 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನನಗೆ ಚಾಸಾ-1 ಮತ್ತು ಚಾಸಾ-2 ರವರು ಗೊತ್ತು. ಚಾಸಾ-1 ರವರು ಹಸು ಮೇಯಿಸುತ್ತಿದ್ದಾಗ ಅವರ ಚಿನ್ನದ ಸರವನ್ನು ಸುಲಿಗೆ ಮಾಡಿದ ಸಂಬಂಧ ಪೊಲೀಸರು ನನ್ನನ್ನು ಕಗ್ಗಲಹಳ್ಳಿ ಗ್ರಾಮದ ಚಾಸಾ-1 ರವರು ಹಸು ಮೇಯಿಸುತ್ತಿದ್ದ ಸ್ಥಳಕ್ಕೆ ಬರ ಮಾಡಿಕೊಂಡು, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಬೆಳಗ್ಗೆ ಅಂದಾಜು 10.00 ರಿಂದ 11.00 ರವರೆಗೆ ಪೊಲೀಸರು ಮಹಜರ್ ಮಾಡಿದರು. ಮಹಜರ್ ಕಾಲಕ್ಕೆ ಸರೋಜಮ್ಮ, ಚಾಸಾ-2 ರವರು ಇದ್ದರು. ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿನ ನನ್ನ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಿರುತ್ತೇನೆ.

ಪಾಟೀ ಸವಾಲು ಆರೋಪಿಗಳ ಪರಃ-

ಆರೋಪಿಗಳ ಪರ ವಕೀಲರು ಗೈರು ಹಾಜರಿದ್ದು ಆರೋಪಿಗಳ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.